ಓ.ಎಸ್. ನಂ. 180/2014

ಡಿ.ಡಬ್ಲ್ಯೂ: 01 (Siddanagouda)

ದಿನಾಂಕ: 29.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ವಾದಿ ಪರ – ಶ್ರೀ KSN ವಕೀಲರಿಂದ.

ನಾನು ದಿ: 10.06.1983 ರಂದು ಹುಟ್ಟಿರುತ್ತೇನೆ. ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಸಹಿ ಮಾಡಲು ಮಾತ್ರ ಬರುತ್ತದೆ. ಗುರುಸಿದ್ದಮ್ಮ ಎಷ್ಟನೇ ಇಸವಿಯಲ್ಲಿ ಮದುವೆಯಾದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾನು ಆ ಬಗ್ಗೆ ಕೇಳಿ ತಿಳಿದುಕೊಂಡಿರುವುದಿಲ್ಲ. ಆಗ ನಾನು ಸಣ್ಣವನಿದ್ದ ಕಾರಣ ನನಗೆ ಗೊತ್ತಿಲ್ಲ. ನಾನು ಅವರ ಮದುವೆಯಾದಾಗ ಎಷ್ಟು ವಯಸ್ಸಿನವನಿದ್ದೆ ಎಂದರೆ ಆಗ ನಾನು ಹುಟ್ಟಿರಲಿಲ್ಲ.

ಪ್ರಮಾಣ ಪತ್ರದಲ್ಲಿ ಬರೆದ ವಿಚಾರ ನನಗೆ ಗೊತ್ತು. ಅದಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರವನ್ನು ನನಗೆ ಗೊತ್ತಿರುವ ವಿಚಾರದ ಆಧಾರದ ಮೇರೆಗೆ ಮಾಹಿತಿಯನ್ನು ನೀಡಿರುತ್ತೇನೆ. ಗುರುಸಿದ್ದಮ್ಮ ಮತ್ತು ಸಿದ್ದಪ್ಪ ಮದುವೆಯಾದ ವಿಚಾರ ನಮ್ಮ ಅಜ್ಜ ಅಜ್ಜಿ ನನಗೆ ಹೇಳಿರುತ್ತಾರೆ. ನಮ್ಮ ಅಮ್ಮನ ತಾಯಿಯ ತಂದೆ-ತಾಯಿ ನನಗೆ ಹೇಳಿರುತ್ತಾರೆ. ನಾನು ಗುರುಸಿದ್ದಮ್ಮಳನ್ನು 5 ವರ್ಷದವನಿದ್ದಾಗ ನೋಡಿರುತ್ತೇನೆ. ಈಗ ನನಗೆ 39 ವರ್ಷ ವಯಸ್ಸು. ದಿ: 08.09.2006 ರಂದು ಹೊನ್ನಳ್ಳಿ ಗ್ರಾಮದಲ್ಲಿ ಮರಣ ಹೊಂದಿರುತ್ತಾಳೆ ಎಂದರೆ 1990 ರಲ್ಲಿ ಮೃತಪಟ್ಟಿರುತ್ತಾಳೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆಕೆಯ ಶವಸಂಸ್ಕಾರವನ್ನು ತವಡೂರಿನಲ್ಲಿ ಮಾಡಿರುತ್ತಾರೆ. ಆಕೆ 1990 ರಲ್ಲಿ ಮೃತಪಟ್ಟಿರುತ್ತಾಳೆ ಎಂಬ ಬಗ್ಗೆ ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ. ಗುರುಸಿದ್ದಮ್ಮ ಗಂಡನೊಂದಿಗೆ ವಾಸ ಮಾಡಿಲ್ಲ ಎಂದರೆ ಮಾಡಿರುತ್ತಾಳೆ. ದಾವಾ ಸ್ವತ್ತು ಸರ್ವೆ ನಂಬರ್ 850 ಎಬಿ ಗುರುಸಿದ್ದಮ್ಮ ಯಾರಿಂದ ಖರೀದಿ ಮಾಡಿದ್ದಾಳೆ ಎಂಬ ಮಾಹಿತಿ ಇಲ್ಲ ಎಂದರೆ ಸುಳ್ಳು. ನಿಪಿ 8 ಋಣಭಾರ ಪತ್ರದ ಪ್ರಕಾರ ದಾವಾ ಸ್ವತ್ತನ್ನು ಗುರುಸಿದ್ದಮ್ಮ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ, ಮಾಡಿರಬಹುದು. ದಾವಾ ಸ್ವತ್ತನ್ನು ಖರೀದಿ ಮಾಡುವಾಗ ಗುರುಸಿದ್ದಮ್ಮ ತವಡೂರು ಗ್ರಾಮದಲ್ಲಿ ವಾಸವಾಗಿದ್ದರು.

1972 ರಲ್ಲಿ ಮೈಲಾರಲಿಂಗಪ್ಪ ಮಗ ಮರಿಗೋಣೆಪ್ಪ ಅವರು ಗುರುಸಿದ್ದಮ್ಮ ಅವರಿಗೆ ದಾವಾ ಸ್ವತ್ತನ್ನು ಆಯ್ಕೆ ಮಾಡಿಕೊಟ್ಟಿದ್ದರು ಎಂದರೆ ಇರಬಹುದು, ಆಗ ಗುರುಸಿದ್ದಮ್ಮ ಮಂಗನಹಳ್ಳಿಯಲ್ಲಿ ವಾಸವಿದ್ದಾಗ ಮಾಡಿಕೊಟ್ಟಿರಬಹುದು. ಅದನ್ನು ಖರೀದಿ ಪತ್ರದ ಮೂಲಕ 1976 ಮತ್ತು 1980 ರಲ್ಲಿ ದಾವಾ ಸ್ವತ್ತುಗಳನ್ನು ಖರೀದಿ ಮಾಡಿದಾಗ ಗುರುಸಿದ್ದಮ್ಮ ಮಂಗನಹಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಅಲ್ಲ, ತವರು ಮನೆಯಲ್ಲಿ

ವಾಸವಾಗಿದ್ದರು. ನಮ್ಮ ಹೇಳಿಕೆಯ ಮೇರೆಗೆ ನಾನು ಜಿಪಿಎ ಪಡೆದ ನಂತರ ಪ್ರತಿವಾದ ಪತ್ರ ತಿದ್ದುಪಡಿ ಮಾಡಲಾಯಿತು ಎಂದರೆ ಮಾಹಿತಿ ಇಲ್ಲ. ದಿಃ 13.05.1987 ರಂದು ಗುರುಸಿದ್ದಮ್ಮ ಉಪನೊಂದಣಾಧಿಕಾರಿ ಕಚೇರಿಗೆ ಬಂದಿಲ್ಲ ಎಂದು ಹೇಳಿದ್ದು, ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಆ ನಮ್ಮ ಕುಟುಂಬದಲ್ಲಿ ಇದ್ದ ಕಾರಣ ಆ ರೀತಿ ದಾನ ಪತ್ರ ಬರೆದುಕೊಟ್ಟಿರುತ್ತಾರೆ. ಆ ದಿನ ಆಕೆ ಉಪನೊಂದಣಾಧಿಕಾರಿ ಕಚೇರಿಗೆ ಬಂದಿಲ್ಲ ಎಂಬ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆಯೇ ಎಂದರೆ ನನಗೆ ಗೊತ್ತಿಲ್ಲ. ನಾನು ಬೇರೆ ಯಾರೋ ಗುರುಸಿದ್ದಮ್ಮಳನ್ನು ಕರೆದುಕೊಂಡು ಬಂದು ದಾನಪತ್ರ ಬರೆಸಿಕೊಂಡಿದ್ದಾರೆ ಎಂದು ಕೆಂಚನಗೌಡ ಅವರ ವಿರುದ್ಧ ಕಾನೂನುಕ್ರಮ ಕೈಗೊಂಡಿದ್ದೇನೆಯೇ ಎಂದರೆ ಇಲ್ಲ.

ಕೆಂಚನಗೌಡ, ಗುರುಸಿದ್ದಮ್ಮ, ಅವರ ತಂದೆ ಭರಮಪ್ಪ ಒಟ್ಟು ಕುಟುಂಬದಲ್ಲಿದ್ದು ವಾದಿಗೆ ದಾನಪತ್ರ ಬರೆದುಕೊಂಡ ಬಗ್ಗೆ ನನಗೆ ಮತ್ತು ನನ್ನ ತಾಯಿಗೆ ಎಲ್ಲರಿಗೂ ಗೊತ್ತಿತ್ತು ಎಂದರೆ ಇಲ್ಲ. ಗುರುಸಿದ್ದಮ್ಮ ಮಂಗನಹಳ್ಳಿಯಲ್ಲಿ ಗ್ರಾಮದಲ್ಲಿ ಮೃತಪಟ್ಟಿದ್ದು, ಆಕೆಯ ಅಂತ್ಯ ಕ್ರಿಯೆಯನ್ನು ಮಂಗನಹಳ್ಳಿಯಲ್ಲಿ ಗ್ರಾಮದಲ್ಲಿ ವಾದಿಯೇ ಮಾಡಿರುತ್ತಾನೆ ಎಂದರೆ ಎಲ್ಲ ಸುಳ್ಳು. ಈ ಬಗ್ಗೆ ಎಲ್ಲ ಗೊತ್ತಿದ್ದರು ಸಹ ಆಕೆ ತವಡೂರಿನಲ್ಲಿ ಮೃತಪಟ್ಟಿದ್ದು, ಅಲ್ಲೇ ಶವಸಂಸ್ಕಾರ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಎಲ್ಲ ಸುಳ್ಳು.

ನಾನು ಹಾಜರುಪಡಿಸಿರುವ ದಾಖಲಾತಿಗಳು ಈ ದಾವೆಗೆ ಸಂಬಂಧಪಟ್ಟಿಲ್ಲ, ಅವುಗಳ ಪೈಕಿ ನಿಡಿ 6, 8 ರಲ್ಲಿ 2 ನೇ ಪುಟ, 9, 23 ಗಳನ್ನು ಬಿಟ್ಟು ಉಳಿದವೆಲ್ಲ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ.

ನಿಡಿ 29 ಸರ್ವೇ ಸ್ಕೆಚ್ಚನ್ನು ಮಾಡಲು ಯಾರು ಅರ್ಜಿ ಕೊಟ್ಟಿದ್ದರು ಎಂದರೆ ನನ್ನ ಅಜ್ಜಿ ಗುರುಸಿದ್ದಮ್ಮ ಕೊಟ್ಟಿದ್ದರು. ಯಾವಾಗ ಸದರಿ ಅರ್ಜಿ ನೀಡಿದ್ದರು ಎಂದರೆ 40 ವರ್ಷದ ಹಿಂದೆ ನೀಡಿರುತ್ತಾರೆ ಎಂದು ನನ್ನ ತಾಯಿ ನನಗೆ ತಿಳಿಸಿರುತ್ತಾಳೆ. ಆ ರೀತಿ ಸುಳ್ಳು ನುಡಿಯುತ್ತಿದ್ದೇನೆ, ಅದು 40 ವರ್ಷದ ಹಿಂದೆ ನೀಡಿರುವ ಅರ್ಜಿ ಎಂದರೆ ಸರಿಯಲ್ಲ. ಅರ್ಜಿಯನ್ನು ಯಾರು ನೀಡಿದರು ಎಂಬ ಬಗ್ಗೆ ನಿಡಿ 29 ರಲ್ಲಿ ಮಾಹಿತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ 29 ಗುರುಸಿದ್ದಮ್ಮ ಮಾಡಿಸಿದ ಸರ್ವೇ ಸ್ಕೆಚ್ ಅಲ್ಲ ಎಂದರೆ ಸರಿಯಲ್ಲ. ನಿಡಿ 29 ನ್ನು ನಾನು ಮತ್ತು ಅಧಿಕಾರಿಗಳು ಸೇರಿಕೊಂಡು ಸೃಷ್ಟಿ ಮಾಡಿದ ದಾಖಲಾತಿ ಎಂದರೆ ಸರಿಯಲ್ಲ. ನಿಡಿ 29 ರ ದೃಢೀಕೃತ ಪ್ರತಿ ಸರ್ವೇ ಇಲಾಖೆ ಮತ್ತು ತಹಶೀಲ್ದಾರ್ ಕಚೇರಿಯಲ್ಲಿ ಲಭ್ಯವಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಓ.ಎಸ್. ನಂ. 180/2014

ಡಿ.ಡಬ್ಲ್ಯು: 01 (Siddanagouda)

ನಿಡಿ 29 ಒಬ್ಬರೇ ಮಾಡಿರುವ ಅಕ್ಷರ ಎಂದರೆ ನನಗೆ ಗೊತ್ತಿಲ್ಲ. ಅದನ್ನು ಎಷ್ಟು ಜನ ಸರ್ವೇದಾರರು ಸರ್ವೇ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾವ ಸರ್ವೇ ನಂಬರನ್ನು ಯಾವ ಸರ್ವೇದಾರರು ಸರ್ವೇ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದನ್ನು ಸೃಷ್ಟಿ ಮಾಡಿ ಹಾಕಿದ್ದರು ಸಹ ನಿಡಿ 29 ರ ಬಗ್ಗೆ ಮಾಹಿತಿ ಇದೆ ಎಂದು ಸುಳ್ಳು ಮಾಹಿತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 29 ರಲ್ಲಿ ನಮೂದಾಗಿರುವಂತೆ ನಮ್ಮ ತಾಯಿ ಎಂದಿಗೂ ಆ ಆಸ್ತಿಗಳ ಸ್ವಾಧೀನದಲ್ಲಿ ಗುರುಸಿದ್ದಮ್ಮ ಕಾಲದಿಂದಲೂ ಇಲ್ಲ ಎಂದರೆ ಸರಿಯಲ್ಲ. ನಿಡಿ 29 ರಲ್ಲಿ ಬರೆದಿರುವ ಮಾಹಿತಿ ಯಾವುದು ಸತ್ಯ ಅಲ್ಲ ಎಂದರೆ ಸುಳ್ಳು.

ಈಗ ನೋಡುತ್ತಿರುವ 1972 ರ ತೊರಾಯ್ಕೆ ಪತ್ರದಂತೆ ದಾವಾ ಸ್ವತ್ತು ಗುರುಸಿದ್ದಮ್ಮಳಿಗೆ ಆಯ್ಕೆಯಾಗಿತ್ತು ಎಂದರೆ ಹೌದು. ಸಾಕ್ಷಿ ಅದನ್ನು ಒಪ್ಪಿದ ಕಾರಣ ಅದನ್ನು **ನಿಪಿ *7* ಎಂ**ದು ಗುರುತಿಸಲಾಯಿತು.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.